# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 675/2021 ಪಿ.ಡಬ್ಲ್ಯೂಃ 2

ಸಿಡಬ್ಲೂಃ 2

ಸಾಕ್ಷಿದಾರರ ಹೆಸರು : ಅಶೋಕ

ತಂದೆಯ ಹೆಸರು : ರಂಗಪ್ಪ

ವಯಸ್ಸು : 33 ವರ್ಷ

ಉದ್ಯೋಗ : ಅಬಕಾರಿ ಪೇದೆ , ಕಾರವಾರ ಉಪ ವಿಭಾಗ

ವಾಸ್ತವ್ಯ : ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 02-01-2024

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನಾನು 2019 ರಿಂದ ಇಲ್ಲಿಯವರೆಗೆ ಅಬಕಾರಿ ಪೇದೆಯಾಗಿ ಕಾರವಾರ ಉಪವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 28.11.2020 ರಂದು ನಾನು ಚಾಸಾ.3, ಮತ್ತು ಪರೇಶ ದೇಸಾಯಿ ಇವರು ಚಾಸಾ.1 ರವರೊಂದಿಗೆ ಇಲಾಖಾ ವಾಹನ ಸಂಖ್ಯೆ ಕೆ ಎ 30 ಜಿ 0492 ನೇದರಲ್ಲಿ ಬೆಳಿಗ್ಗೆ 6.00 ಗಂಟೆಗೆ ಕಚೇರಿ ಬಿಟ್ಟು ಕಾರವಾರ ತಾಲೂಕಿನ ಮಾವಿನಹೊಳೆ ಹತ್ತಿರ ರಸ್ತೆಗಾವಲು ನಡೆಸುತ್ತಿರುವಾಗ ಸುಮಾರು 6.30 ಕ್ಕೆ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದವನನ್ನು ನೋಡಿ ಸದರಿ ವಾಹನ ನಿಲ್ಲಿಸಲು ಹೇಳಿದ್ದು , ನಮ್ಮ ಇಲಾಖಾ ಜೀಪ ಮತ್ತು ನಾವು ಸಮವಸ್ತ್ರದಲ್ಲಿರುವುದನ್ನು ಕಂಡು ಆದ 20 ಮೀಟರ ಅಂತರದಲ್ಲಿ ವಾಹನವನ್ನು ನಿಲ್ಲಿಸಿ ಓಡಿ ಹೋದನು. ಆತನನ್ನು ಬೆನ್ನಟ್ಟಿದರೂ ಅತ ಸಿಗದೇ ಅರಣ್ಯದಲ್ಲಿ ಪರಾರಿಯಾದನು. ಸದರಿ ವ್ಯಕ್ತಿ ಬಿಟ್ಟು ಹೋದ ವಾಹನ ಸಂಖ್ಯೆ ಕೆ ಎ 30 ಎಸ್ 6027 ಆಗಿತ್ತು. ವಾಹನವನ್ನು ಪರಿಶೀಲಿಸಲು ಪಂಚರಾಗಿ ಬರಲು ಯಾರೂ ಒಪ್ಪದೇ ಇದ್ದರಿಂದ ಇಲಾಖೆಯ ಸಿಬ್ಬಂದಿಯವರಾದ ನನ್ನನ್ನು ಮತ್ತು ಚಾಸಾ.3 ರವರನ್ನು ಪಂಚರಾಗಿ ಸಹಕರಿಸುವಂತೆ ಚಾಸಾ.1 ರವರು ಕೋರಿದಾಗ ನಾವು ಒಪ್ಪಿಕೊಂಡೆವು. ನ್ಯಾಯಾಲಯದಿಂದ ವಾರಂಟ ಪಡೆಯಲು ಕಾಲಾವಕಾಶ ಇಲ್ಲದೇ ಇದ್ದ ಕಾರಣ ಮತ್ತು ಸಾಕ್ಷ್ಯ ನಾಶವಾಗುವ ಕಾರಣ ಚಾಸಾ.1 ರವರು ಸ್ಥಳದಲ್ಲೇ ಕ.ಅ.ಕಾಯ್ದೆ ಕಲಂ 54 ರ ಪ್ರಕಾರ ಶೋಧನಾ ಸಮ್ಮುಚಿತ ಆಧಾರ ಪತ್ರ ತಯಾರಿಸಿದರು..

3. ನಂತರ ವಾಹನವನ್ನು ಸವಿಸ್ತಾರವಾಗಿ ಪರಿಶೀಲಿಸಿದಾಗ ಅದು ಕೆಂಪು ಬಣ್ಣದ ಹೊಂಡಾ ಎಕ್ಟಿವಾ ಕಂಪನಿಯ ವಾಹನವಾಗಿದ್ದು, ಸಂಖ್ಯೆ ಕೆ ಎ 30 ಎಸ್ 6027 ಆಗಿತ್ತು. ಸದರಿ ವಾಹನದ ಕಾಲಿಡುವ ಜಾಗದಲ್ಲಿ

ಒಂದು ಪ್ಲಾಸ್ಟಿಕ ಚೀಲ ಇದ್ದು ಮದ್ಯದ ವಾಸನೆ ಬರುತ್ತಿತ್ತು. ಸದರಿ ಚೀಲವನ್ನು ಪರಿಶೀಲಿಸಿದಾಗ ಒಂದು ಲೀ. ಸಾಮರ್ಥ್ಯದ 7 ಲೂಜ ಫೆನ್ನಿ ಬಾಟಲುಗಳು , 750 ಎಂ ಎಲ್ ನ ಲೈಟ ಹಾರ್ಸ ವಿಸ್ಕಿ 12 ಬಾಟಲುಗಳು , ವಾಹನದ ಡಿಕ್ಕಿಯಲ್ಲಿ 750 ಎಂ ಎಲ್ ನ ಗೋವಾ ಪಾಮ ಫೆನ್ನಿ 6 ಬಾಟಲುಗಳು ಇರುವುದು ಕಂಡು ಬಂದಿತು. ಅವುಗಳ ಮೇಲೆ for sale in Goa only ಎಂದು ನುೂದಿಸಲಾಗಿತ್ತು. ಯಾವುದೇ ಪಾಸ್ / ಪರ್ಮೀಟ ಸಿಗಲಿಲ್ಲಾ.

4. ತದನಂತರ ಎಲ್ಲಾ ಮು ಮಾಗಳನ್ನು ಇಲಾಖಾ ವಶಕ್ಕೆ ಪಡೆದುಕೊಂಡು ರಾಸಾಯನಿಕ ಪರೀಕ್ಷೆಗಾಗಿ ತಲಾ ಬ್ರಾಂಡಿನ 2 ಬಾಟಲುಗಳನ್ನು ಮತ್ತು 1 ಲೀಟರ ಸಾಮರ್ಥ್ಯದ ಒಂದು ಲೂಜ ಫೆನ್ನಿ ಬಾಟಲಂತೆ ಒಂಟು 5 ಬಾಟಲುಗಳನ್ನು ತೆಗೆಯಲಾಯಿತು. ಎಲ್ಲಾ ಮು ಮಾಗಳ ಮೇಲೆ ಬಟ್ಟೆ ಸುತ್ತಿ , ದಾರ ಸುತ್ತಿ , ಇಲಾಖಾ ಅರಗು ಹಾಕಿ , ಚಾಸಾ.1 ಮತ್ತು ನಮ್ಮ ಸಹಿ ಇರುವ ಮಾದರಿ ಚೀಟಿಯನ್ನು ತಯಾರಿಸಿ ಮು ಮಾ ಗಳ ಮೇಲೆ ಅಂಟಿಸಲಾಯಿತು. ಎಲ್ಲಾ ಮು ಮಾ ಗಳನ್ನು ಇಲಾಖಾ ವಶಕ್ಕೆ ಪಡೆದುಕೊಂಡು ಪಂಚನಾಮೆಯನ್ನು ಬೆಳಿಗ್ಗೆ 6.40 ರಿಂದ 7.40 ರ ವರೆಗೆ ಬರೆದು ಮುಗಿಸಲಾಯಿತು. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ. ಎಲ್ಲಾ ಮು ಮಾಗಳನ್ನು ವಶಪಡಿಸಿಕೊಂಡು ಕಚೇರಿಗೆ ತಂದು ಚಾಸಾ.1 ರವರು ಆರೋಪಿತನ ವಿರುದ್ಧ ಸರಕಾರದ ಪರವಾಗಿ ದೂರನ್ನು ದಾಖಲಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ನಿಪಿ.1 ನ್ನು ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು.

5. ದಿನಾಂಕಃ 23.12.2020 ರಂದು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮು ಮಾ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಧಾರವಾಡಕ್ಕೆ ತೆಗೆದುಕೊಂಡು ಹೋಗಿರುತ್ತೇನೆ ಮತ್ತು ದಿನಾಂಕಃ 03.02.2021 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ದಿನಾಂಃ 27.01.2021 ರಂದು ಚಾಸಾ.6 ರವರಿಗೆ ಹೇಳಿಕೆ ನೀಡಿರುತ್ತೇನೆ. ದಿನಾಂಕಃ 30.03.2021 ರಂದು ಆರೋಪಿಯನ್ನು ಗುರುತಿಸಿದ ಬಗ್ಗೆ ನನ್ನ ಮರು ಹೇಳಿಕೆಯನ್ನು ಚಾಸಾ.6 ರವರಿಗೆ ನೀಡಿರುತ್ತೇನೆ. ಮು ಮಾ ಗಳನ್ನು ರಾಸಾಯನಿಕ ಪರಿಕ್ಷೆಗೆ ತೆಗೆದುಕೊಂಡು ಹೋಗಿ ವರದಿಯನ್ನು ತೆಗೆದುಕೊಂಡ ಬಂದ ಬಗ್ಗೆ ಚಾಸಾ.6 ರವರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ಮತ್ತು ಮು ಮಾ ಗಳನ್ನು ನೋಡಿ ಗುರುತಿಸುತ್ತೇನೆ.

6. ನ್ಯಾಯಾಲಯದ ಮುಂದಿರುವ ನಿಪಿ.3 ನ್ನು ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನ್ಯಾಯಾಲಯದ ಮುಂದಿರುವ ಮು ಮಾ ಗಳನ್ನು ನೋಡಿ

ಗುರುತಿಸುತ್ತೇನೆ. ಅವುಗಳ ಮೇಲಿರುವ ಸಹಿ ನನ್ನದೇ ಅಗಿರುತ್ತದೆ. ಅವುಗಳನ್ನು ಮು ಮಾ 1(ಬಿ) ರಿಂದ ಮು ಮಾ 5(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ ಪಿ ಟಿ ಆರೋಪಿ ಪರ ವಕೀಲರಿಂದ**

7. ಈ ಮೊದಲು ನಾನು 2-3 ಪ್ರಕರಣಗಳಲ್ಲಿ ಪಂಚನಾಗಿ ಸಾಕ್ಷಿ ನುಡಿದಿದ್ದೇನೆ. ಇನ್ನುಳಿದ ಪ್ರಕರಣದಲ್ಲೂ ಸಹ ಈ ಪ್ರಕರಣದಲ್ಲಿ ಹೇಳಿದ ಸಂಗತಿಗಳು ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ನಮ್ಮ ಇಲಾಖೆಯ ದಿನಗೂಲಿ ನೌಕರರನ್ನು ಪಂಚರನ್ನಾಗಿ ಮಾಡುತ್ತೇವೆ ಎಂದರೆ ಸರಿ. ಚಾಸಾ.1 ನಮ್ಮ ಮೇಲಾಧಿಕಾರಿಗಳು ಮತ್ತು ಕರ್ತವ್ಯಕ್ಕೆ ಸಂಬಂಧಿಸಿದಂತೆ ಅವರ ಆದೇಶವನ್ನು ಪಾಲಿಸಬೇಕಾಗುತ್ತದೆ ಎಂದರೆ ಸರಿ. ಪಂಚರಿಗೆ ನೋಟೀಸನ್ನು ನೀಡಬೇಕಾಗುತ್ತದೆ ಎಂದರೆ ಸರಿ . ಪಂಚರಾಗುವಂತೆ ನಮಗೆ ನೋಟೀಸನ್ನು ನೀಡಿರುವುದಿಲ್ಲಾ ಎಂದರೆ ಸರಿ. ಸಾಮಾನ್ಯವಾಗಿ ನಾವು ದಾಳಿಗೆ ಹೋಗುವಾಗ ದಾಳಿಗೆ ಬೇಕಾಗುವ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತೇವೆ ಎಂದರೆ ಸರಿ. ದಾಳಿಗೆ ಹೋಗುವಾಗ ನಾವು ಲ್ಯಾಪಟಾಪ ಮತ್ತು ಪ್ರಿಂಟರನ್ನು , ಪಂಚರನ್ನು ಮತ್ತು ಟೈಪರೈಟರನ್ನು ತೆಗೆದುಕೊಂಡು ಹೋಗುತ್ತೇವೆ ಎಂದರೆ ಸರಿಯಲ್ಲ. ನಾವು ಪಂಚರನ್ನು ದಾಳಿಗೆ ಕರೆದುಕೊಂಡು ಹೋಗುತ್ತೇವೆ ಎಂದರೆ ಬಾತ್ಮಿ ಬಂದಿದ್ದರೆ ಮಾತ್ರ ಕರೆದುಕೊಂಡು ಹೋಗುತ್ತೇವೆ. ಮಾವಿನಹೊಳೆ ಪ್ರದೇಶದಲ್ಲಿ ಮನೆಗಳು, ಅಂಗಡಿಗಳು ಮತ್ತು ಹೋಟೇಲಗಳು ಇವೆ ಎಂದರೆ ಬಹಳ ದೂರದಲ್ಲಿ ಇವೆ. ಅಲ್ಲಿಂದ 200 ಮೀಟರ ಅಂತರದಲ್ಲಿ 4 ರಸ್ತೆಗಳು ಇದ್ದು , ಅಲ್ಲಿ ದೇವಸ್ಥಾನಕ್ಕೆ ಹೋಗುವ ಜನರು ಮತ್ತು ಶಾಲೆಗೆ ಹೋಗುವ ಮಕ್ಕಳು ಮತ್ತು ಜನರು ಇರುತ್ತಾರೆ ಎಂದರೆ ಸರಿ. ಸದರಿ ಸ್ಥಳ ಜನದಟ್ಟನೆ ಮತ್ತು ವಾಹನದಟ್ಟನೆ ಇರುವ ಪ್ರದೇಶ ಎಂದರೆ ಸರಿ. ಸಭೆಯಲ್ಲಿ ನಮ್ಮ ಇಲಾಖೆಯವರನ್ನೇ ಪಂಚರನ್ನಾಗಿ ಮಾಡಬೇಕೆಂದು ನಿರ್ದೇಶನ ನೀಡಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲಾ. ಚಾಸಾ.1 ರವರು ಜನರಿಗೆ ಪಂಚರಾಗಿ ಸಹಕರಿಸುವಂತೆ ಕೋರಿದ್ದರು , ಆದರೆ ಅವರಿಗೆ ನೋಟೀಸನ್ನು ನೀಡಿರುವುದಿಲ್ಲಾ. ನೋಟೀಸ ಕೊಡದೇ ಇರಲು ವಿಶೇಷ ಕಾರಣ ಇತ್ತೇ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲಾ. ಯಾವುದೇ ಕಾಲಕ್ಕೆ ಆರೋಪಿ ನಮ್ಮನ್ನು ನೋಡಿ ಓಡಿ ಹೋಗಿರುವುದಿಲ್ಲಾ ಎಂದರೆ ಸರಿಯಲ್ಲ. ಸ್ಥಳದಲ್ಲಿ ಜನರಿದ್ದರೂ ಸಹ ಅವರನ್ನು ಪಂಚರನ್ನಾಗಿ ಮಾಡದೇ ಇಲಾಖೆಯವರನ್ನೇ ಪಂಚರನ್ನಾಗಿ ಮಾಡಲಾಗಿದೆ ಮತ್ತು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನದಂದು ನಾನು ಬರೆದ ದಿನಚರಿಯನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ ಎಂದರೆ ಸರಿ.

8. ನಾವು ಆ ದಿನ ಘಟನಾ ಸ್ಥಳಕ್ಕೆ ಹೋಗಿಲ್ಲಾ, ಆ ದಿನ ಯಾವುದೇ ಮು ಮಾಗಳನ್ನು ವಶಪಡಿಸಿಕೊಂಡಿಲ್ಲಾ , ಪಂಚನಾಮೆಯನ್ನು ಮಾಡಿಲ್ಲಾ , ಮು ಮಾ ಗಳಿಗೂ ಆರೋಪಿಗೂ ಸಂಬಂಧ ಇಲ್ಲಾ

ಎಂದರೆ ಸರಿಯಲ್ಲ. ವಾರಿಸಾದಾರರಿಲ್ಲದ ಮು ಮಾಗಳನ್ನು ಉಪಯೋಗಿಸಿಕೊಂಡು ಅಂಕೆಸಂಖ್ಯೆಗೋಸ್ಕರ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ವಾಹನಕ್ಕೂ ಆರೋಪಿತನಿಗೂ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಠಾಣೆಯಲ್ಲೇ ಪಂಚನಾಮೆಯನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗಾಗಿ ಮು ಮಾ ಗಳನ್ನು ತೆಗೆದುಕೊಂಡು ಹೋಗಿಲ್ಲಾ ಮತ್ತು ವರದಿಯನ್ನು ತಂದಿರುವುದಿಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**